Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 256 | ಶನಿವಾರ 7—6—47 | ಬಿಡಿ ಪ್ರತಿ 3 ಪೈ

ಇಂದಿನ ವರ್ತಮಾನ

ನವದೆಹಲಿ ಜೂ೯ 5 — ಭಾರತ ವಿಭಜನೆಯಾಗುವದಕ್ಕಾಗಿ ತಾವು ಆಮರಣಾಂತ ಉಪವಾಸ ಕೈಗೊಳ್ಳುವುದಿಲ್ಲವೇ ಎಂದು ಗಾಂಧೀಜಿಗೆ ಒಂದು ಟಿಲಿಗ್ರಾಂ ಬಂದಿದೆಯೆಂದೂ ತಾವು ಇತರ ಆಜ್ಞೆ ಮೇರೆ ಉಪವಾಸ ಮಾಡುವುದಿಲ್ಲವೆಂದೂ ತಮ್ಮ ಅಂತರಾತ್ಮನ ಭೋಧೆಯಾದರೆ ಮಾಡುವರೆಂದು ಪ್ರಾರ್ಥನ ಕಾಲದಲ್ಲಿ ತಿಳಿಸಿದರು.

ಕಲ್ಕತ್ತಾ ಜೂ೯ 6 — ಬಂಗಾಳಾ ವಿಭಾಗ ಸಂಬಂಧದಲ್ಲಿ ವೈಸರಾಯರಿಂದ ಬಂಗಾಳಾ ಗೌರ್ನರಿಗೆ ಸಲಹೆ ಬಂದಿದೆ.

ಮದರಾಸು ಜೂ೯ 5 — ಮದರಾಸು ಮತ್ತು ನೀಲಗಿರಿ ಕುದುರೆ ಜೂಜುಗಳಲ್ಲಿ ಬಾಜೀ ಹಣದ ತೆರಿಗೆ ಹೆಚ್ಚಿಸಲಾಗುವುದೆಂದು ತಿಳಿಯು ಬಂದಿದೆ.

ವಾಷಿಂಗ್ ಟನ್ ಜೂ೯ 5 — ಅಮೇರಿಕಾ ಜನರು ಪ್ಯಾಲಿಸ್ತೈನಿನಲ್ಲಿ ನ್ಯಾಯಬಾಹಿರ ಕಾರ್ಯಗಳಿಗೆ ಉತ್ತೇಜನ ಕೊಡುವುದನ್ನು ನಿಲ್ಲಿಸಬೇಕೆಂದು ಪ್ರೆಸಿಡೆಂಟ್ ಟ್ರೂಮನ್ನರು ಹೇಳಿರುವರು.

ಲಂಡನ್ ಜೂ೯ 6 — ಬಿವಿನ್ನರಿಗೆ ಒಂದು ಬಾಂಬುಳ್ಳ ಕಾಗದ ಬಂದಿದೆ. ಅದು ಇಟಲಿಯಲ್ಲಿ ಪೋಸ್ಟು ಮಾಡಲ್ಪಟ್ಟಿರುವುದು.

ಟೋಕಿಯೋ ಜೂ೯ 5 — ಡೆಲ್ಲಿಯ ಅಖಿಲ ಭಾರತ ಹಿಂದೂ ಧರ್ಮ ಸೇವಾ ಸಂಘದವರು ಜಪಾನಿನ ಭೂಕಂಪ ಪರಿಹಾರ ನಿಧಿಗೆ ರೂ. 676 ಉದಾರ ದಾನ ಮಾಡಿದ್ದಾರೆ.

ಕರಾಚಿ ಜೂ೯ 5 — ಅಕ್ಕಿ ಅಭಾವ ಸ್ಥಳಗಳ ಉಪಯೋಗವಾಗಿ ಸಿಂಧ್ 20 ಸಾವಿರ ಟನ್ ಅಕ್ಕಿ ಕಳುಹಿಸುವುದು.

ಲಾಹೋರು ಜೂ೯ 6 — ಬ್ರಿಟಿಷ್ ಯೋಜನೆಯಂತೆ ಪಂಜಾಬಿನ ವಿಭಾಗದ ಕಾರ್ಯ ಪ್ರಾರಂಭವಾಗಿದೆ. ಕಾಂಗ್ರೆಸ್ ಅಸೆಂಬ್ಲಿ ಪಾರ್ಟಿ ಮಿಟಿಂಗಿನಲ್ಲಿ ಹೊಸ ಯೋಜನೆ ಚರ್ಚಿಸಿ ತರಾವು ಪಾಸು ಮಾಡಿತು.

ನವದೆಹಲಿ — ಭಾರತದಲ್ಲೂ ಅಟಂ ಶೋಧನಾ ಬೋರ್ಡನ್ನು ನಿರ್ಮಿಸಲಾಗಿದೆ.

ಧರ್ಮ ಯುದ್ಧದಲ್ಲಿ ಮೊದಲನೆಯ

ಬಲಿದಾನ

ಧ. ಯು. ಸ. ಬುಲೆಟಿನ್

ಲೇ:— ರಾಜಾ ಎಸ್. ಗುರುರಾಜಾ

ಚಾರ್ಯ, ಅಖಿಲ ಕರ್ನಾಟಕ

ಸನಾತನಿಗಳ ಸಂಘ, ಮಂತ್ರಾಲಯ.

ನವದೆಹಲಿ

ಧರ್ಮವೀರರನ್ನು ಸರಿಯಾಗಿ ಕಾಣತಿಳ್ಳ. ಸನ್ಯಾಸಿಗಳ ದಂಡಗಳನ್ನು ವಾಪ್ಸು ಕೊಡಲಿಲ್ಲವೆಂದು ಹತ್ತು ದಿನಗಳಿಂದ ಅನ್ನ ನೀರುಗಳನ್ನು ಬಿಟ್ಟು ಶುದ್ಧೋಪವಾಸ ಮಾಡುತ್ತಿದ್ದ ಮಹಾತ್ಮ ಶ್ರೀ ಸ್ವಾಮಿ ಕೃಷ್ಣಾನಂದ ತೀರ್ಥ ಮಹಾರಾಜರನ್ನು (ಅವರ ಜೀವನವು ಅಪಾಯದಲ್ಲಿರುವುದನ್ನರಿತು ತಮ್ಮ ಹೊಣೆಗಾರಿಕೆಯನ್ನು ತೆಪ್ಪಿಸಿ ಕೊಳ್ಳಬೇಕೆಂಬ ದುರ್ಬುದ್ಧಿಯಿಂದ) ಈ ದಿವಸ ದೆಹಲಿಯ ಡಿಸ್ಟ್ರಿಕ್ಟ್ ಜೈಲಿನಿಂದ ಬಿಡುಗಡೆ ಮಾಡಿದರು. ಬಿಡುಗಡೆಯಾದ ಐದು ಘಂಟೆಯ ನಂತರ ಶ್ರೀ ಸ್ವಾಮಿಗಳು ಉಪವಾಸದಿಂದಲೇ ತಮ್ಮ ಪಾಂಚ ಭೌತಿಕ ಶರೀರವನ್ನು ತ್ಯಾಗ ಮಾಡಿ ಅಮರರಾದರು. ಇದರಿಂದ ಧರ್ಮ ಯುದ್ಧದ ಪವಿತ್ರ ಇತಿಹಾಸವು ಪ್ರಕಾಶವಾಗಿ ಶ್ರೀ ಪಂಡಿತ ನೆಹರೂರವರು ಮುಖಕ್ಕೆ ಶಾಶ್ವತ ಕಳಂಕವು ತಟ್ಟಿದಂತಾಯಿತು. ಶ್ರೀ ಸ್ವಾಮಿಜೀಯವರು ಸ್ವರ್ಗಸ್ಥರಾಗುವ ಮೂರು ದಿನ ಮುಂಚಿತವಾಗಿಯೇ ದೆಹಲಿಯ ನಾಗರೀಕರ ವಿಶೇಷ ಒತ್ತಾಯದ ಮೇಲೆ ಮ್ಯಾಜಿಸ್ಟ್ರೇಟರು ಸನ್ಯಾಸಿಗಳ ದಂಡವನ್ನು ವಾಪ್ಸು ಕೊಟ್ಟು ಸರಿಯಾಗಿ ನೋಡಿಕೊಳ್ಳಬೇಕೆಂದು ಆಜ್ಞಾಪಿಸಿದ್ದರೂ ಕಾಂಗ್ರೆಸಿಗರಾದ ಕೆಲ ಕಾಂಗ್ರೆಸಿಗರ ಮಾತಿಗೆ ಕಿವಿಗೊಟ್ಟ ಪೋಲೀಸರು ದಂಡವನ್ನು ವಾಪ್ಸು ಕೊಡಲಿಲ್ಲ. ಇದರ ಪರಿಣಾಮವೇ ಸ್ವಾಮಿಜೀಯವರ ಬಲಿದಾನ. ಶ್ರೀ ಸ್ವಾಮಿಜೀಯವರು ಶಿವಾಲಾ ಮತದ ಪರಂಪರೆಯಲ್ಲಿ ಶ್ರೀ ಸ್ವಾಮಿ ಓಂಕಾರಾನಂದ ತೀರ್ಥರ ಶಿಷ್ಯರೂ, ಅಜನ್ಮ ಬ್ರಹ್ಮಚಾರಿಗಳೂ, ದೊಡ್ಡ ಪಂಡಿತರೂ ಆಗಿದ್ದರು.

ಪೂರ್ಣ ಸ್ವಾತಂತ್ರ್ಯಕ್ಕೆ ಮೊದಲೇ ಈ ರೀತಿ ಪವಿತ್ರಾತ್ಮರಾದ ಸಾಧು ಸನ್ಯಾಸಿಗಳ ಮರಣಕ್ಕೆ ಕಾರಣವಾದ ಕಾಂಗ್ರೆಸ್ ಸರಕಾರವು ಸ್ವತಂತ್ರ ಭಾರತದಲ್ಲಿ ಇನ್ನೆಷ್ಟು ಸಾಧು ಸಂತರ ಜೀವನವನ್ನು ಹೀರುವುದೋ ದೇವರೇ ಬಲ್ಲ ಸ್ವಾಮಿಯವರ ಸಾವಿಗೆ ಕಾಂಗ್ರೆಸ್ ಸರಕಾರವೇ ಹೊಣೆಯಾಗಿದೆ. ವೈಸ್ರಾಯರವರು ಇದನ್ನು ಕೂಡಲೇ ವಿಚಾರಣೆ ಮಾಡಿ ಅಪರಾಧಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವಿದ್ದಲ್ಲಿ ದೇಶದಲ್ಲಿ ನಿರಂಕುಶಾಧಿಕಾರ ಅನ್ಯಾಯ ಅನೀತಿ ಮತ್ತು ಬ್ಲಾಕ್‌ಮಾರ್ಕೆಟಿಗಳು ತಾಂಡವಾಡುವುದರಲ್ಲಿ ಸಂದೇಹವಿಲ್ಲ. ಅಧಿಕಾರಲಾಲಸೆಯಿಂದ ಮತ್ತರಾದ ಕಾಂಗ್ರೆಸಿಗರ ಕೈಯಲ್ಲಿ ಸರ್ವಸ್ವವನ್ನೂ ಅರ್ಪಿಸಿರುವ ಹಿಂದೂಗಳೇ, ಈಗಲಾದರೂ ಎಚ್ಚೆತ್ತು ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಮುಸ್ಲಿಮರಿಗಿಂತ ಕಾಂಗ್ರೆಸ್ ಸರಕಾರವೇ ಹಿಂದೂಮತದ ನಿಜವಾದ ವೈರಿಯಾಗಿದೆ ಎನ್ನಲು ಮೇಲಿನ ಘಟನೆಯೇ ನಿದರ್ಶನವಾಗಿದೆ.

ವೇಲಾರೋಡ್, ಕೆಂಪು ಕೋಟೆ ರಸ್ತೆ, ದಿವಾನ ಹಾಲ್, ಪೆರೇಡ್ ಮೈದಾನ, ದರೀಬ್ ಕಲಾ, ಚಾಂದನೀ ಚೌಕ ಮುಂತಾದ ಕಡೆ ಸುತ್ತಿಕೊಂಡು ಗುಲಿಯಾಚಾರಕ್ಕೆ ಬಂದಾಗ ಪೋಲೀಸರು ಅದನ್ನು ತಡೆದು ಧರ್ಮವೀರರು ಹಿಡಿದಿದ್ದ ಸೈಕ್ ಬೋರ್ಡುಗಳನ್ನು ಕೊಡಬೇಕೆಂದು ಕೇಳಿದರು. ಅದರಲ್ಲಿ 'ಧರ್ಮ ಯುದ್ಧದ ಪ್ರಥಮ ಬಲಿದಾನ ಸೆರೆಮನೆಯಲ್ಲಿ ಅನ್ನೋದಕ ಬಿಟ್ಟು ಶುದ್ಧೋಪವಾಸ ಮಾಡಿ ಮೃತರಾದ ಶ್ರೀ ಕೃಷ್ಣಾನಂದ ತೀರ್ಥರು' ಎಂದು ಬರೆದಿದ್ದಿತು. ಬೋರ್ಡುಗಳನ್ನು ಕೊಡಲೊಪ್ಪದಿರಲು ಪೋಲೀಸರು ಬಲಾತ್ಕಾರದಿಂದವುಗಳನ್ನು ಕಿತ್ತುಕೊಂಡರು. ಜನರು ಬೋರ್ಡಿನಲ್ಲಿದ್ದ ವಿಷಯವನ್ನು ಜಯಧ್ವನಿಯೊಡನೆ ಕೂಗಿ ಕೂಗಿ ಹೇಳಿಹತ್ತಿದರು. ಮೇರವಣಿಗೆಯು ಯಮುನಾ ತೀರಕ್ಕೆ ಬಂದಿತು. ಶ್ರೀ ಸ್ವಾಮೀಜಿಯವರನ್ನು ಯುನೆಯಲ್ಲಿ ಜಲಸಮಾಧಿ ಮಾಡಲಾಯಿತು. ಮತ್ತು ಪ್ರಚಂಡ ಸಭೆ ಸೇರಿ ಶ್ರೀ ಸ್ವಾಮೀಜಿಯವರ ತ್ಯಾಗ ಧರ್ಮ ದಿಕ್ಷೆಯನ್ನು ಪ್ರಶಂಸಿಸಿ ಕಾಂಗ್ರೆಸ್ಸಿನ ನೀತಿಯನ್ನು ಖಂಡಿಸಿ ಭಾಷಣ ಮಾಡಿ ಜನರು ಸ್ವಾಮಿಜೀಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಿದರು.

ದೆಹಲಿಯಲ್ಲಿ ಈ ದಿವಸ ಸಂಪೂರ್ಣ ಹರತಾಳವನ್ನಾಚರಿಸಲಾಯಿತು. ದೆಹಲಿಯ ಮಾರ್ಕೆಂಟಾಯಿಲ್ ಅಸೋಸಿಯೇಷನ್ನಿನ ಪ್ರೇರಣೆಯಿಂದ ಕಪಾಡಾ ಮಂಡಿ, ಕಟಫೀಸ್ ಬಜಾರ್, ಷೇರ್ ಬಜಾರ್‌ಗಳಲ್ಲಿಯೂ ಮತ್ತು ಕಿರಾಣಿ ಕಮಿಟಿಯ ಘೋಷಣೆಯ ಮೇರೆಗೆ ಕಿರಾಣಿ ಮಂಡಿ, ಧುಲಿಯಾಕಟಾರಾ, ಶಹನ್‌ಷಹಾ ಕಟಾರಾ, ಮಹಾಲಕ್ಷ್ಮೀ ಮಾರ್ಕೆಟ್, ಸೂಫ್ ಬಜ್ರಾಂ ಮುಂತಾದ ಕಡೆಗೆಳಲ್ಲಿ ಪೂರ್ಣ ಹರತಾಳವು ನಡೆಯಿತು. ಮತ್ತು ಸ್ವಾಮಿಜೀಯವರ ಮರಣ ವೃತ್ತಾಂತವನ್ನು ಪ್ರಕಟಿಸದಿದ್ದಕ್ಕಾಗಿ ಪತ್ರಿಕೆಗಳ ಸಂಕುಚಿತ ಮನೋವೃತ್ತಿಯನ್ನೂ ನೀತಿಯನ್ನೂ ಖಂಡಿಸಲಾಯಿತು.

ಶ್ರೀ ಸ್ವಾಮಿಜೀಯವರ ಕಳೇಬರದ ಉತ್ಸವವು ಶಂಖ ಘಂಟಾ ಕಹಳೆ ಪತಾಕವಾದ್ಯ ವೈಭವದೊಡನೆ ಹಾಗೂ ಸಾಧು ಸಂತಮಂಡಳೀಶ ರಾಜ ವಿದ್ಯಾರ್ಥಿ ವಿದ್ವಾಂಸ ಸನಾತನಿ ನಾಗರೀಕರೇ ಮೊದಲಾದ ಏಳು ಸಹಸ್ರ ಜನ ಸಮೂಹದೊಡನೆ ಸಾಯಂಕಾಲ ನಾಲ್ಕು ಘಂಟೆಗ ನಿಗಮಬೋಧ ಘಾಟಿನಿಂದ ಹೊರಟು ಹನುಮ ಮಂದಿರ

ಮೈಸೂರು ಸಕ್ಕರೆ ಕಂಪೆನಿ ಕೆಲಸಗಾರರ ಸಂಘ, ಮಂಡ್ಯ

ಸಾತ್ನೂರು ಫಾರಂಗೆ ಕೆಲಸಗಾರರ ಸಂಘದ ಪ್ರತಿನಿಧಿಗಳ ಭೇಟಿ

ಮಂಡ್ಯ ಜೂ 5— ಸಕ್ಕರೆ ಕಂಪೆನಿಗೆ ಸೇರಿದ ಸಾತ್ನೂರು ಫಾರಂಗೆ ನಿನ್ನೆ ದಿನ ಕೆಲಸಗಾರರ ಸಂಘದ ಉಸಾಧ್ಯಕ್ಷರೂ ಕಾರ್ಯದರ್ಶಿಗಳೂ ಮತ್ತು ಇತರ ಸಮಿತಿ ಸದಸ್ಯರೊಡನೆ ನಿನ್ನೆ ದಿನ ಬೇಟಿಯಿತ್ತು ಅಲ್ಲಿಯ ಕೂಲಿಗಾರರ ಸ್ಥಿತಿಗತಿಗಳನ್ನು ವಿಚಾರಿಸಿದರು. ಮಳೆ ಬರುತ್ತಿದ್ದರೂ ನೂರಾರು ಮಂದಿ ಕೆಲಸಗಾರರು ಸೇರಿದ್ದು ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂದು ಕೋರಿದರು. ನೆರೆದಿದ್ದವರನ್ನು ಉದ್ದೇಶಿಸಿ ಕಾರ್ಯದರ್ಶಿ ಶ್ರೀ ರಾಮಣ್ಣನವರು ಕೆಲಸಗಾರರು ಸಂಘಟಿತರಾಗಿ ಶಿಸ್ತಿನಿಂದಿದ್ದರೆ ಎಲ್ಲವನ್ನೂ ಅಡಳಿತ ಮಂಡಲಿಯು ಮುಂದಿಟ್ಟು ಇತ್ಯರ್ಥಪಡಿಸಲೆತ್ನಿಸುವುದಕ್ಕೆ ಪ್ರಯತ್ನಿಸುವುದಾಗಿ ಭರವಸೆ ಇತ್ತರು. ಅಲ್ಲಿ ತಿಳಿದ ವಿಚಾರಗಳ ವರದಿಯನ್ನು ಕಂಪೆನಿಯು ಫೇರ್ಮೈನ್ಸರಿಗೆ ಕಳುಹಿಸಲಾಗಿದೆ.

ಹರಿಕಥೆ

ರಾಜಧಾನಿಯು ಸಂಕ್ರೇಪೇಟೆಯುಬ್ಲಿರುವ ಕುಂಚಟಿಗರ ಶ್ರೀರಾಮಮಂದಿರದಲ್ಲಿ ತಾರೀಖು 8–6–47 ನೇ ಭಾನುವಾರದಿಂದ ಪ್ರತಿನಿತ್ಯವೂ ಸಂಜೆ 7 ಘಂಟೆಯಿಂದ 8½ ಘಂಟೆಯವರೆಗೆ ಶ್ರೀ ಎಲ್. ಲಕ್ಷ್ಮೀಪತಿ ಸಹೋದರರಿಂದ ಶ್ರೀಮದ್ರಾಮಾಯಣವು ಹರಿಕಥಾ ರೂಪವಾಗಿ ನಡೆಯುತ್ತದೆ.

ಅರಮನೆ ಸುದ್ದಿ

ಮೈಸೂರು ಜೂನ್ 6, 1947 — ಶ್ರೀಮನ್ಮಹಾರಾಜರವರು ಅಮೇರಿಕಾದಲ್ಲಿ ಮೈಸೂರು ಕೈಗಾರಿಕೆಗಳ ಏಜಂಟರಾಗಿರುವ ಕರ್ನಲ್ ಜಿ. ಇ. ಫೆಲ್ಪ್ಸ್ ರಿಗೆ ಭೇಟಿ ದಯಪಾಲಿಸಿದರು.

ನರೇಂದ್ರಮಂಡಲ

ನವದೆಹಲಿ ಜೂ 5— ಪ್ಯಾರವಾಂಟ್ಸಿಯು ಮಾಯುವಾಗುವುದರಿಂದ ನರೇಂದ್ರ ಮಂಡಲವನ್ನು ರದ್ದು ಪಡಿಸಬೇಕೆಂಬ ನಿರ್ಣಯವನ್ನು ಮಂಡಲದ ಸ್ಥಾಯಾ ಸಮಿತಿ ಪಾಸುಮಾಡಿದೆ.

ಮಹಾಜನರ ಕೋರಿಕೆಯಂತೆ ಪ್ರತಿದಿನ ೩-೩೦ ಕ್ಕೆ ಮ್ಯಾಟ್ನಿ

.... ವುಡ್‌ಲ್ಯಾಂಡ್ಸ್ ಮೈಸೂರು ...

ತಾ|| 8-6-47 ರಿಂದ ಅಮೋಘ 6 ನೇ ವಾರ

ನಾವು ಇಬ್ಬರು (ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

At Opera

8 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ಗಾಜಕುಮಾರಿ

(ತಮಿಳು)

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ



ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೆಸರಿ ಗಿಡಗಳಿಂದ ಆರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾಮದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಿಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ತಿಪಾಡಿಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.



ರಪ್ಪು ಆಗಲಿರುವ ಮೋಟಾರ್ ಸೈಕಲ್ಲುಗಳು

Edited, Printed and Published by M. S Krishna Rao at the Seatyvadi Press Chamaraj Agrahar, Mysore.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಜೆವೆಚ್ಚಸೇರಿ 1--12--0